ಅಸಲು ದಾವೆ ನಂ.27/2019 ಪಿ.ಡಬ್ಲೂಃ 1

ಯೋಗೇಶ ಬಿನ್ ಜವರಪ್ಪ

ದಿನಾಂಕಃ 16/07/2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು 7 ಮತ್ತು 8 ನೇ ಪ್ರತಿವಾದಿಯರ ಪರವಾಗಿ ಶ್ರೀ ಕೆ.ಎಸ್.ವಿ. ವಕೀಲರಿಂದ

9. ನಾನು ಕೂಲಿ ಕೆಲಸ ಮಾಡುತ್ತಿರುತ್ತೇನೆ. ನಾನು ಕೇರಳಾಪುರ ಗ್ರಾಮದಲ್ಲಿ ಒಂದು ಶಾಮಿಯಾನ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಅಂಗಡಿಯನ್ನು ನಾನು ಈಗ ಸುಮಾರು 5 ವರ್ಷಗಳಿಂದ ಇಟ್ಟುಕೊಂಡಿರುತ್ತೇನೆ. ಅದೇ ರೀತಿ ನಾನು ಕೇರಳಾಪುರ ಗ್ರಾಮದ ಸಹಕಾರ ಸಂಘದ ಅಧ್ಯಕ್ಷನಾಗಿರುತ್ತೇನೆ ಎಂದರೆ ಸರಿ. ಈಗ ಸಮಾರು 2 ವರ್ಷಗಳಿಂದ ಸದರಿ ಸಂಘದ ಅಧ್ಯಕ್ಷನಾಗಿರುತ್ತೇನೆ. ಸಾಮಾನ್ಯವಾಗಿ ಸದರಿ ಸಂಘದ ಅಧ್ಯಕ್ಷರ ಅವಧಿಯು 5 ವರ್ಷ ಇರುತ್ತದೆ. ನಾನು ಇದಕ್ಕಿಂತ ಮುಂಚೆಯೂ ಸಹ ಸುಮಾರು 1 ವರ್ಷದವರೆಗೆ ಸದರಿ ಸಂಘದ ಅಧ್ಯಕ್ಷನಾಗಿದ್ದೆ. ಅದೇ ರೀತಿ ನಾನು ಕೇರಳಾಪುರದಲ್ಲಿ 23 ಗುಂಟೆ ಜಮೀನನ್ನು ಹೊಂದಿರುತ್ತೇನೆ ಎಂದರೆ ಸರಿ. ನನಗೆ ವಾರ್ಷಿಕ 2 ರಿಂದ 3 ಲಕ್ಷ ರೂಪಾಯಿಗಳ ಆದಾಯ ಇರುತ್ತದೆ ಎಂದರೆ ಸರಿಯಲ್ಲ ಆದರೆ ಸುಮಾರು 1 ಲಕ್ಷ ರೂಪಾಯಿಗಳು ಇರುತ್ತದೆ. ನಾನು ಯಾವತ್ತೂ ಕೂಲಿ ಕೆಲಸವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

10. ನನ್ನ ಸಹೋದರರಾದ 3 ನೇ ವಾದಿಯು ಗಾರೆ ಕೆಲಸ ಮಾಡುತ್ತಾರೆ ಮತ್ತು 4 ನೇ ವಾದಿಯು ಹಣ್ಣಿನ ವ್ಯಾಪಾರವನ್ನು ಮಾಡುತ್ತಾರೆ. ನಾವು 3 ಜನ ಒಟ್ಟಿಗೆ ವಾಸವಾಗಿರುತ್ತೇವೆ ಮತ್ತು ನಮ್ಮ ಮಧ್ಯ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನಮ್ಮ 3 ಜನರ ಕುಟುಂಬಕ್ಕೆ ಒಟ್ಟು 30 ಗುಂಟೆ ಆಸ್ತಿ ಇರುತ್ತದೆ. ಸದರಿ 30 ಗುಂಟೆ ಜಮೀನಿನಲ್ಲಿ ಮೇಲೆ ಹೇಳಿದ ನನ್ನ 23 ಗುಂಟೆ ಜಮೀನು ಸೇರಿಕೊಂಡಿರುವುದಿಲ್ಲ ಕಾರಣ ಅದು ನನ್ನ ಪ್ರತ್ಯೇಕ ಆಸ್ತಿಯಾಗಿರುತ್ತದೆ. ನಮ್ಮ ಕುಟುಂಬದ ಯಾಜಮಾನಿಕೆಯನ್ನು ನಮ್ಮ ತಾಯಿಯಾದ 1 ನೇ ವಾದಿಯರು ಮಾಡುತ್ತಿರುತ್ತಾರೆ. ನಮ್ಮ ತಂದೆಯವರು ಜೀವಂತ ಇರುವಾಗ ಅವರು ಯಾಜಮಾನಿಕೆಯನ್ನು ಮಾಡುತ್ತಿದ್ದರು ಮತ್ತು ಅವರ ಮರಣದ ನಂತರ ನಮ್ಮ ತಾಯಿಯವರು ಮಾಡುತ್ತಿರುತ್ತಾರೆ. ನಮ್ಮ ತಂದೆಯವರು ಜೀವಂತ ಇದ್ದಾಗ ನಮ್ಮ ಕುಟುಂಬದಲ್ಲಿ ಒಟ್ಟು 7 ಜನ ಸದಸ್ಯರು ಇದ್ದರು ಅಂದರೆ ನಮ್ಮ ತಂದೆ-ತಾಯಿ ಹಾಗೂ ನಾವು 5 ಜನ ಸಹೋದರ ಸಹೋದರಿಯರು. ಈಗ ನಮ್ಮ ಕುಟುಂಬದಲ್ಲಿ ನಾವು 4 ಜನ ವಾದಿಯರು ನನ್ನ ಹೆಂಡತಿ ಹಾಗೂ 3 ನೇ ವಾದಿಯ ಹೆಂಡತಿ ಇರುತ್ತಾರೆ.

11. ನಮ್ಮ ಕುಟುಂಬಕ್ಕೆ ಇರುವ 30 ಗುಂಟೆ ಜಮೀನಿನಲ್ಲಿ 6 ಗುಂಟೆ ಜಮೀನನ್ನು ನಮ್ಮ ತಂದೆಯವರು ಖರೀದಿಸಿರುತ್ತಾರೆ, 13 ಗುಂಟೆ ಜಮೀನು ನಮ್ಮ ಅಜ್ಜಿಗೆ ಅವರ ತವರು ಮನೆಯ ಕಡೆಯಿಂದ ಬಂದಿರುತ್ತದೆ ಹಾಗೂ ಉಳಿದ ಜಮೀನನ್ನು ನಮ್ಮ ಅಜ್ಜರವರು ನಮ್ಮ ಅಜ್ಜಿಗೆ ಜೀವನಾಂಶದ ರೂಪದಲ್ಲಿ ಕೊಟ್ಟಿರುತ್ತಾರೆ. ಉಳಿದ ಜಮೀನನ್ನು ನಮ್ಮ ಅಜ್ಜರವರು ನಮ್ಮ ಅಜ್ಜಿಗೆ ಜೀವನಾಂಶದ

ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ನಾವು ನಮ್ಮ ದಾವೆಯಲ್ಲಿ ಹೇಳಿ ಬರೆಯಿಸಿರುತ್ತೇವೆ. ಈ ರೀತಿ ನಾವು ಬರೆಯಿಸಿರುವುದಿಲ್ಲ ಹೊರತು ನಮ್ಮ ಅಜ್ಜರವರು ತಾತ್ಕಾಲಿಕವಾಗಿ ಜಮೀನನ್ನು ನಮ್ಮ ತಂದೆಯ ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದು ಬರೆಯಿಸಿರುತ್ತೇವೆ ಎಂದರೆ ಸರಿ. ಈ ರೀತಿ ನಮ್ಮ ಅಜ್ಜರವರು ನಮ್ಮ ತಂದೆಯ ಹಿಸ್ಸೆಗೆ ತಾತ್ಕಾಲಿಕವಾಗಿ ನೀಡಿದ್ದ ಜಮೀನುಗಳನ್ನು ನಾವು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಜಮೀನನ್ನು ನಮ್ಮ ಅಜ್ಜರವರು ನಮ್ಮ ತಂದೆಯ ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದು ತಿಳಿದುಕೊಂಡು ನಾವು ಅದನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎನ್ನುವ ಸೂಚನೆಗೆ ಸಾಕ್ಷಿಯು ಜೀವನಾಂಶದ ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

12. 1958 ರಲ್ಲಿ ಆದ ವಿಭಾಗ ಪತ್ರದ ಪ್ರಕಾರ ನಮ್ಮ ತಂದೆಯವರು ಅವರ ಮರಣದ ಸಮಯದವರೆಗೂ ನಡೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಇಸವಿಯಲ್ಲಿ ಆದ ಪತ್ರದ ಬಗ್ಗೆ ನಾವು ನಮ್ಮ ದಾವೆಯಲ್ಲಿ ಬರೆಯಿಸಿರುವುದಿಲ್ಲ ಎಂದರೆ ಸರಿ. ನಾನು ಸದರಿ ಪತ್ರವನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ದಾಖಲೆಯು ವಿಭಾಗ ಪತ್ರ ಆಗಿದ್ದು ಅದರಲ್ಲಿ ನಮ್ಮ ತಂದೆಯವರು ತಮ್ಮ ಹಿಸ್ಸೆಯನ್ನು ಪಡೆದುಕೊಂಡು ಭವಿಷ್ಯದಲ್ಲಿ ನಮ್ಮ ಅಜ್ಜರವರು ಸಂಪಾದಿಸುವಂತಹ ಯಾವುದೇ ಆಸ್ತಿಗಳಲ್ಲಿ ಹಿಸ್ಸೆ ಕೇಳುವುದಿಲ್ಲ ಮತ್ತು ಹಕ್ಕು ಇರುವುದಿಲ್ಲ ಎಂದು ನಮ್ಮ ತಂದೆಯವರು ಬರೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಬರೆದುಕೊಟ್ಟ ಕಾರಣಕ್ಕಾಗಿ ನಮ್ಮ ತಂದೆಯವರು ಜೀವಂತ ಇರುವವರೆಗೂ ಈ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಅವರ ಚಿಕ್ಕಮ್ಮರಾಗಿದ್ದ ಮಾಳಮ್ಮ ರವರ ಮಕ್ಕಳ ಹತ್ತಿರ ನಮ್ಮ ಅಜ್ಜರವರು ಮರಣ ಹೊಂದಿದ ನಂತರ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿದ್ದರು ಆದರೆ ಅವರು ಕೊಡಲಿಲ್ಲ ಎಂದು ನುಡಿಯುತ್ತಾರೆ. ಹೀಗೆ ಸುಮಾರು 1991-92 ರಲ್ಲಿ ನಮ್ಮ ಸಹೋದರಿಯರ ಮದುವೆಯ ಸಮಯದಲ್ಲಿ ಮೂರು ಸಲ ನಮ್ಮ ತಂದೆಯವರು ಹಿಸ್ಸೆ ಕೇಳಿದ್ದರು. ಹೀಗೆ ಹಿಸ್ಸೆ ಕೇಳಿದ್ದರು ಎಂದು ನಾವು ನಮ್ಮ ವಾದ ಪತ್ರದಲ್ಲಿ ಬರೆಯಿಸಿರುವುದಿಲ್ಲ . ಅದನ್ನು ವಾದ ಪತ್ರದಲ್ಲಿ ಬರೆಯಿಸಲು ನಮಗೆ ಗೊತ್ತಾಗಲಿಲ್ಲ ನಮ್ಮ ತಂದೆಯವರು ಈ ರೀತಿ ಯಾವತ್ತೂ ಹಿಸ್ಸೆ ಕೇಳಿರಲಿಲ್ಲ ಮತ್ತು ಆ ಕಾರಣಕ್ಕಾಗಿ ನಾವು ಅದನ್ನು ನಮ್ಮ ವಾದ ಪತ್ರದಲ್ಲಿ ಬರೆಯಿಸಿರುವುದಿಲ್ಲ ಎಂದರೆ ಸರಿಯಲ್ಲ. 1958 ರಲ್ಲಿ ನಮ್ಮ ತಂದೆಯವರು ವಿಭಾಗ ಪತ್ರವನ್ನು ಬರೆದುಕೊಟ್ಟಿದ್ದಕ್ಕಾಗಿ ಮತ್ತು ಅದರ ಪ್ರಕಾರ ಅವರು ನಡೆದುಕೊಂಡಿದ್ದಕ್ಕಾಗಿ ಅವರು ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೇಳಿರಲಿಲ್ಲ ಎಂದರೆ ಸರಿಯಲ್ಲ.

13. ನಮ್ಮ ತಂದೆಯವರು ಮರಣ ಹೊಂದಿದ ನಂತರ ನಾವು ವಾದಿಯವರು ದಾವಾ ಆಸ್ತಿಗಳಲ್ಲಿ ಪ್ರತಿವಾದಿಯರ ಹತ್ತಿರ ಹಿಸ್ಸೆ ಕೇಳಿರುವುದಿಲ್ಲ ಕಾರಣ ಅವರು ನಮ್ಮ ತಂದೆಯವರಿಗೆಯೇ ಕೇಳಿದಾಗ ಹಿಸ್ಸೆ ಕೊಟ್ಟಿರಲಿಲ್ಲ. ನಾವು ಹಿಸ್ಸೆ ಕೇಳದೆ ನೇರವಾಗಿ ಈ ದಾವೆ ದಾಖಲಿಸಿರುತ್ತೇವೆ ಕಾರಣ ನಮ್ಮ ತಂದೆಯವರು ಆವಾಗಲೇ ಹಿಸ್ಸೆ ಹೇಳಿದ್ದಕ್ಕೆ ಅವರು ನಿರಾಕರಿದ್ದರು. 1958 ರಲ್ಲಿ ಪತ್ರ

ಬರೆಯುವಾಗ ನಮ್ಮ ಅಜ್ಜನ ಕುಟುಂಬಕ್ಕೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ ಮತ್ತು ನಾನು ಈ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಆ ಸಮಯದಲ್ಲಿ ನಮ್ಮ ಅಜ್ಜನಿಗೆ ಒಂದು ಸರ್ವೆ ನಂಬರಿನಲ್ಲಿ 6 ಗುಂಟೆ ಹಾಗೂ ಇನ್ನೊಂದು ಸರ್ವೆ ನಂಬರಿನಲ್ಲಿ 21 ಗುಂಟೆ ಜಮೀನು ಇದ್ದು ಅವರು ನಮ್ಮ ತಂದೆಗೆ ಒಂದು ಸರ್ವೆ ನಂಬರಿನಲ್ಲಿದ್ದ ಸಂಪೂರ್ಣ ಆರು ಗುಂಟೆ ಹಾಗೂ ಇನ್ನೊಂದು ಸರ್ವೆ ನಂಬರಿನಲ್ಲಿ 7 ಗುಂಟೆ ಹಾಗೂ ಒಂದು ಮನೆಯನ್ನು ಹಿಸ್ಸೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಅಜ್ಜರವರು ತಮ್ಮ ಹಿಸ್ಸೆಗೆ 14 ಗುಂಟೆ ಜಮೀನನ್ನು ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಜಮೀನುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳದೆ ನಮ್ಮ ಕುಟುಂಬಕ್ಕೆ ಬಹಳ ಆಸ್ತಿಗಳಿದ್ದವು ಎಂದು ನಾವು ನಮ್ಮ ವಾದಪತ್ರದಲ್ಲಿ ಯಾವುದೇ ಆಧಾರವಿಲ್ಲದೆ ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ

14. ನಾವು ನಮ್ಮ ವಾದಪತ್ರದ 4 ನೇ ಪ್ಯಾರಾದಲ್ಲಿ ನಮ್ಮ ತಂದೆಯ ಹಿಸ್ಸೆಗೆ ಕಾನೂನಿನ ಪ್ರಕಾರ ಎಷ್ಟು ಜಮೀನು ಬರಬೇಕಾಗಿತ್ತು ಅಷ್ಟು ಜಮೀನನ್ನು ಅವರ ಜೀವನಕ್ಕಾಗಿ ನಮ್ಮ ಅಜ್ಜರವರು ಕೊಟ್ಟಿರುವುದಿಲ್ಲ ಎಂದು ಬರೆಯಿಸಿದ್ದು ಎಷ್ಟು ಜಮೀನಿನ ವ್ಯತ್ಯಾಸ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾವು ಯಾವುದೇ ಮಾಹಿತಿಯನ್ನು ತಿಳಿದುಕೊಳ್ಳದೆ ಮತ್ತು ಆಧಾರವಿಲ್ಲದೆ ಈ ರೀತಿ ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ನಮ್ಮ ಅಜ್ಜನಿಗೆ ಭೂ ಸುಧಾರಣಾ ಅಧಿನಿಯವರು ಅಡಿಯಲ್ಲಿ ಬಂದಿರುತ್ತವೆ.

15. 1 ನೇ ಐಟಂ ಸ್ವತ್ತಿನಲ್ಲಿ 7 ಮತ್ತು 8 ನೇ ಪ್ರತಿವಾದಿಯರು ಎಷ್ಟು ಎಷ್ಟು ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರಿಬ್ಬರೂ ಸದರಿ ಸ್ವತ್ತಿನಲ್ಲಿ ಹಿಸ್ಸೆ ಮಾಡಿಕೊಂಡು 7 ನೇ ಪ್ರತಿವಾದಿಯು 11 ಗುಂಟೆ, 8 ನೇ ಪ್ರತಿವಾದಿಯು 10 ಗುಂಟೆ ಹಾಗೂ ಉಳಿದ ಜಮೀನನ್ನು ಅವರ ಅಣ್ಣನಾದ ನಿಂಗಪ್ಪರವರು ಸಾಗುವಳಿ ಮಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆ ದಾಖಲಿಸುವ ಸಂದರ್ಭದಲ್ಲಿ 1 ನೇ ಐಟಂ ಸ್ವತ್ತು ಮಾಳಮ್ಮರವರ ಹೆಸರಿನಲ್ಲಿ ದಾಖಲಿತ್ತು. 2012 ರಲ್ಲಿ ಮಾಳಮ್ಮ ಹಾಗೂ 7 ಮತ್ತು 8 ನೇ ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಹಿಸ್ಸೆ ಮಾಡಿಕೊಂಡಿದ್ದರು ಮತ್ತು ಅದು ಕಾನೂನು ಬಾಹಿರವಾಗಿರುತ್ತದೆ ಎಂದು ನಾವು ನಮ್ಮ ವಾದಪತ್ರದಲ್ಲಿ ಬರೆಯಿಸಿರುತ್ತೇವೆ ಎಂದರೆ ಸರಿ . ನಿಂಗಪ್ಪರವರೂ ಸಹ ದಾವಾ ಆಸ್ತಿಗಳ ಪೈಕಿ ಸ್ವಲ್ಪ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುತ್ತಾರೆ ಎಂದು ತೋರಿಸಲು ನಾವು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ 7 ಮತ್ತು 8 ನೇ ಪ್ರತಿವಾದಿಯರು ಹಾಗೂ ನಿಂಗಪ್ಪರವರು ವಿಭಾಗ ಮಾಡಿಕೊಂಡು ಮೇಲೆ ಹೇಳಿದಷ್ಟು ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುತ್ತಾರೆ ಎಂದು ನಾವು ನಮ್ಮ ವಾದಪತ್ರದಲ್ಲಿ ಬರೆಯಿಸಿರುವುದಿಲ್ಲ ಕಾರಣ ಅದನ್ನು ಬರೆಸಲು ನಮಗೆ ಗೊತ್ತಾಗಿರುವುದಿಲ್ಲ.

ಅಸಲು ದಾವೆ ನಂ.27/2019 ಪಿ.ಡಬ್ಲೂಃ 1

16. ಈಗ ದಾವಾ ಆಸ್ತಿ ಐಟಂ ನಂ.2 ರಲ್ಲಿ 1 ಎಕರೆ 5 ಗುಂಟೆ ಜಮೀನನ್ನು 7 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿರುತ್ತಾರೆ ಮತ್ತು ಉಳಿದ ಜಮೀನನ್ನು 8 ನೇ ಪ್ರತಿವಾದಿಯು ಮಾಡುತ್ತಿರುತ್ತಾರೆ. ಅದೇ ರೀತಿ ಐಟಂ ನಂ.3 ರಲ್ಲಿ ಸಂಪೂರ್ಣ 7 ಗುಂಟೆ ಜಮೀನನ್ನು 8 ನೇ ಪ್ರತಿವಾದಿಯು ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ಸರಿ. ನಮ್ಮ ಅಜ್ಜರವರು 1982 ರಲ್ಲಿ ಮರಣ ಹೊಂದಿದ ಸಮಯದಿಂದ ಎಲ್ಲಾ ದಾವಾ ಆಸ್ತಿಗಳಲ್ಲಿ ಮಾಳಮ್ಮ, 7 ಹಾಗೂ 8 ನೇ ಪ್ರತಿವಾದಿಯರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಅದೇ ರೀತಿ 2012 ರಿಂದ ಎಲ್ಲಾ ದಾವಾ ಆಸ್ತಿಗಳನ್ನು 7 ಹಾಗೂ 8 ನೇ ಪ್ರತಿವಾದಿಯರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ.

17. ದಾವಾ ಆಸ್ತಿ ಐಟಂ ನಂ.2 ರಲ್ಲಿ 1 ಎಕರೆ 30 ಗುಂಟೆ ಜಮೀನಿನಲ್ಲಿ ಈಗ 10 ಗುಂಟೆ ಜಮೀನು ಅನ್ಯ ಸಂಕ್ರಮಣ ಆಗಿರುತ್ತದೆ ಎಂದರೆ ಸರಿ. ಅದನ್ನು ಅನ್ಯ ಸಂಕ್ರಮಣ ಮಾಡಿಕೊಳ್ಳಲು ಎಲ್ಲ ಖರ್ಚು ವೆಚ್ಚವನ್ನು 8 ನೇ ಪ್ರತಿವಾದಿಯವರೇ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಅನ್ಯ ಸಂಕ್ರಮಣ ಆಗಿರುವ ಜಮೀನಿನಲ್ಲಿ 8 ನೇ ಪ್ರತಿವಾದಿಯವರು ಒಂದು ಆರ್.ಸಿ.ಸಿ. ಮನೆ ಹಾಗೂ 4 ಅಂಗಡಿ ಮಳಿಗೆಗಳನ್ನು ಕಟ್ಟಿಸಿರುತ್ತಾರೆ ಮತ್ತು ಉಳಿದ ಜಮೀನನ್ನು 9 ಮತ್ತು 10 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಐಟಂ ನಂ.2 ರಲ್ಲಿ 7 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ 1 ಎಕರೆ 5 ಗುಂಟೆ ಜಮೀನಿನಲ್ಲಿ ಅವರು ಒಂದು ಮನೆಯನ್ನು ಕಟ್ಟಿಸಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಎರಡೂ ಮನೆಗಳು ಈ ದಾವೆ ದಾಖಲಿಸಿದ ಸಮಯದಲ್ಲಿ ಅಸ್ತಿತ್ವದಲ್ಲಿದ್ದವು ಎಂದರೆ ಸರಿ. 8 ನೇ ಪ್ರತಿವಾದಿಯರು ಕಟ್ಟಿಸಿರುವ ಮನೆಯ ಬಗ್ಗೆ ನಾವು ನಮ್ಮ ವಾದಪತ್ರದಲ್ಲಿ ಹೇಳಿರುತ್ತೇವೆ ಆದರೆ 7 ನೇ ಪ್ರತಿವಾದಿಯರು ಕಟ್ಟಿಸಿರುವ ಮನೆಯ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ನಾವು ವಾದಿಯರು ಯಾವತ್ತೂ ದಾವಾ ಜಮೀನುಗಳಲ್ಲಿ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿ ಕಾರಣ ನಮ್ಮ ಅಜ್ಜರವರು ಮಾಡುತ್ತಿದ್ದರು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ಮುಜಫರ್)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.